

## ಜೋಗದ ಭೋರ್ಗರೆತಕ್ಕೆ ಸಾಟಿಯಿಲ್ಲ

ರಾಜ ರಾಣಿ ರೋರರ್ ರಾಕೆಟ್‌ಗಳೆಲ್ಲ ಒಂದೇ ಆಗಿ ನಭಕ್ಕೆ ತಲುಪುವ ಹಾಗೆ ಸಮೂಹಗಾಯನ ಮಾಡುತ್ತ ಧುಮುಕುವ ಮಳೆಗಾಲದ ಜೋಗದ ವೈಭವ ನೋಡಿಯೇ ಸವಿಯಬೇಕು. ಆದರೆ ಈ ಮಳೆಗಾಲದಲ್ಲಿ ಜೋಗದ ಸಿರಿಯ ಸಮೂಹಗಾನವನ್ನು ಕಾಡಹಕ್ಕಿಯ ಹಾಡಿನಂತೆ ಕೇಳುವವರಿರಲಿಲ್ಲ. ಆಗಸ್ಟ್‌ನಲ್ಲಿ ಲಾಕ್‌ಡೌನ್ ತೆರವಿನ ನಂತರ, ಜೋಗದ ಜಲನರ್ತನದ ರಭಸವನ್ನೂ ಮೀರಿಸುವ ಹಾಗೆ ಪ್ರವಾಸಿಗರು ಬರಲು ಶುರುವಾಗಿದ್ದಾರೆ. ಪ್ರಾಧಿಕಾರದ, ಸರ್ಕಾರದ ನಿಯಮಾನುಸಾರ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಮತ್ತು ಮಾಸ್ಕ್ ಧರಿಸುವ ನಿಯಮ ಕಡ್ಡಾಯಗೊಳಿಸಿದ್ದರೂ ಪ್ರವಾಸಿಗರು ಲೆಕ್ಕಿಸುತ್ತಿಲ್ಲ

ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿಸಿ ಆಗಸ್ಟ್ ತಿಂಗಳಿನಲ್ಲಿ ಸುಮಾರು 65 ಸಾವಿರ ಪ್ರವಾಸಿಗರು ಜಲಪಾತದ ವೀಕ್ಷಣೆಗೆ ಬಂದಿದ್ದಾರೆ. ವೀಕೆಂಡ್‌ಗಳಲ್ಲಿ ಪ್ರತಿದಿನ ಜೋಗ ನಿರ್ವಹಣಾ ಪ್ರಾಧಿಕಾರದ ಪ್ರಧಾನ ಗೇಟಿನಲ್ಲಿ 2 ಲಕ್ಷಕ್ಕೂ ಮೀರಿ ಪ್ರವೇಶ ಶುಲ್ಕ ಸಂಗ್ರಹವಾಗುವ ಹಂತಕ್ಕೆ ಬಂದು ನಿಂತಿದೆ.

ಅತ್ಯಂತ ಎತ್ತರದಿಂದ ಯಾವುದೇ ಅಡೆತಡೆಯಿಲ್ಲದೇ ಧುಮ್ಮಿಕ್ಕುವ ರಾಜ, ಇಡೀ ಪ್ರದೇಶದಲ್ಲಿ ಗುಂಯ್ ಎಂಬ ಶಬ್ದ ಮಾರ್ದನಿಸುವಂತೆ ಕವಲುಗಳಲ್ಲಿ ಗರ್ಜಿಸಿ ಹರಿಯುವ ರೋರರ್, ಭೋರ್ ಬಂಡೆಗಳ ಮೇಲೆ ರಭಸವಾಗಿ ಬಿದ್ದು ಟಿಸಿಲು ಟಿಸಿಲಾಗಿ ಚಿಮ್ಮುವ ರಾಕೆಟ್, ಬಂಡೆಗಳ ಮೇಲೆ ನಯವಾಗಿ ವಯ್ಯಾರದಿಂದ ನುಣುಪಾಗಿ ಜಾರುತ್ತಾ ಜೋಗದ ಗುಂಡಿ ಸೇರುವ ರಾಣಿಯ ನಯನ ಮನೋಹರ ದೃಶ್ಯಗಳನ್ನು ಪ್ರವಾಸಿಗರು ಕಣ್ತುಂಬಿಕೊಳ್ಳುತ್ತಿದ್ದಾರೆ. ಸದ್ಯ ಜೋಗದ ಗುಂಡಿಗೆ ತೆರಳುವ ದಾರಿಯನ್ನು ಮುಚ್ಚಲಾಗಿದೆ. ಜೋಗದ ಗುಂಡಿಯ ಮಾರ್ಗದಲ್ಲಿ ಜಲಪಾತದ ಒಂದೊಂದು ಮಜಲುಗಳನ್ನು ವಿಭಿನ್ನ ಕೋನದಲ್ಲಿ ಸೆರೆ ಹಿಡಿದು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುವ ಅವಕಾಶ ಸದ್ಯ ಇಲ್ಲವಾಗಿದೆ.

ಜೋಗ ಬಹುಜನಪ್ರಿಯ ಪ್ರವಾಸಿ ತಾಣವಾಗಿದ್ದರೂ ಅದಕ್ಕೆ ತಕ್ಕ ಹಾಗೆ ಮೂಲಸೌಕರ್ಯಗಳು ಅಭಿವೃದ್ಧಿಗೊಂಡಿಲ್ಲ. ಪ್ರಸಕ್ತ ಸರ್ಕಾರ 120 ಕೋಟಿಗಳ ಅನುದಾನ ಇಲ್ಲಿನ ಅಭಿವೃದ್ಧಿಗಾಗಿ ಮೀಸಲಾಗಿರಿಸಿದೆ. ಸರ್ವ ಋತು ಪ್ರವಾಸಿ ತಾಣದ ಕನಸನ್ನು ನನಸು ಮಾಡುವ ಸವಾಲು ಜೋಗ ನಿರ್ವಹಣಾ ಪ್ರಾಧಿಕಾರದ ಎದುರು ಇದೆ. ಯುವಜನತೆಗೆ ಪೂರಕವಾಗಿ ಸುಂದರವಾದ ಈಜುಕೊಳದ ಪ್ರಸ್ತಾಪ ಬಂದಿದೆ. ಜಲಸಿರಿಯ ಜೊತೆಗೆ ಬೆರೆಯಲು ವೇವ್ ಪೂಲ್ ನಿರ್ಮಾಣದ ಕನಸು ಚಿಗುರೊಡೆಯುತ್ತಿದೆ. ಆದರೆ ಜೋಗದ ನೊರೆಹಾಲಿನ ಅಬ್ಬರದ ಮುಂದೆ ಉಳಿದೆಲ್ಲ ಕೊರತೆಗಳೂ ಹಿನ್ನೆಲೆಗೆ ಸರಿಯುತ್ತವೆ.

ಕಡಲತೀರಗಳು, ಯಲ್ಲಾಪುರ, ಶಿರಸಿ ಸುತ್ತಮುತ್ತಲಿನ ಜಲಧಾರೆಗಳು, ಜೋಯಿಡಾದ ದಟ್ಟ ಕಾನನ, ಬೇಡ್ತಿ, ಅಘನಾಶಿನಿ, ಕಾಳಿಯಂಥ ನದಿಗಳ ಜಲತನನನ... ಹೀಗೆ ಪ್ರವಾಸಿಗರನ್ನು ಸೆಳೆದುಕೊಳ್ಳಲು ಪೈಪೋಟಿಗೆ ಬಿದ್ದಂತೆ ಕಾಣುವ ಪ್ರವಾಸಿಕೇಂದ್ರಗಳು ಈಗ ಜನರಿಲ್ಲದೆ ಭಣಗುಡುತ್ತಿವೆ. ಆತಿಥ್ಯ ವಲಯವನ್ನೇ ನೆಚ್ಚಿಕೊಂಡು ಲಕ್ಷಾಂತರ ರೂಪಾಯಿಗಳ ಬಂಡವಾಳ ಹೂಡಿದ್ದವರು ಸಾಲದ ಕಂತು ಪಾವತಿಸಲೂ ಸಾಧ್ಯವಾಗದೆ ಚಿಂತೆಯಲ್ಲಿದ್ದಾರೆ. ಆದರೆ ಕೇಂದ್ರ ಸರ್ಕಾರವು ಲಾಕ್‌ಡೌನ್ ನಿಯಮಗಳನ್ನು ಸಡಿಲಿಸಿದ ಬಳಿಕ ಜಿಲ್ಲೆಯ ಪ್ರವಾಸಿ ತಾಣಗಳಿಗೆ ಪ್ರವಾಸಿಗರ ಹರಿವು ನಿಧಾನವಾಗಿ ಶುರುವಾಗಿರುವುದು ಅವರ ಉಸಿರಾಟವನ್ನು ತುಸು ನಿರಾಳಗೊಳಿಸಿರುವುದೂ ನಿಜ.

ಕಾರವಾರದ ರವೀಂದ್ರನಾಥ ಟ್ಯಾಗೋರ್ ಕಡಲತೀರ, ಮುರ್ಡೇಶ್ವರ, ಜೊಯಿಡಾದ ಹೋಮ್ ಸ್ಟೇಗಳು, ಯಲ್ಲಾಪುರದ ಸಾತೊಡ್ಡಿ, ಮಾಗೋಡು, ಶಿರಲೆ ಜಲಪಾತಗಳು, ಜೇನುಕಲ್ಲುಗುಡ್ಡ, ಸಿದ್ದಾಪುರದ ಬುರುಡೆ ಫಾಲ್ಸ್, ಶಿರಸಿಯ ಉಂಚಳ್ಳಿ ಫಾಲ್ಸ್, ಯಾಣಕ್ಕೆ ಪ್ರವಾಸಿಗರು ಭೇಟಿ ನೀಡಲು ಆರಂಭಿಸಿದ್ದಾರೆ. ಪ್ರತಿ ವರ್ಷ ವಿದೇಶಿಗರಿಂದಲೇ ಮಿಜಿಗುಡುತ್ತಿದ್ದ ಓಂ ಬೀಚ್ ಈಗ ಸ್ವದೇಶಿ ಪ್ರವಾಸಿಗರ ವಿರಳ ಓಡಾಟದಲ್ಲಿಯೇ ತೃಪ್ತಿಪಟ್ಟುಕೊಳ್ಳುತ್ತಿದೆ.

### ಸುರಕ್ಷತೆಗೆ ಆದ್ಯತೆ

ಉತ್ತರಕನ್ನಡ ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರಲ್ಲಿ ರಾಜ್ಯ ರಾಜಧಾನಿ ಬೆಂಗಳೂರಿನವರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ರೆಸಾರ್ಟ್, ಹೋಮ್‌ಸ್ಟೇ, ಹೋಟೆಲ್ ಕೊಠಡಿಗಳನ್ನು ಆನ್‌ಲೈನ್ ಬುಕಿಂಗ್ ಮಾಡಿಕೊಂಡು ಬರುತ್ತಾರೆ. ಅವರ ಹಾಗೂ ಉದ್ಯಮ ನಡೆಸುವವರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ.

‘ಪ್ರವಾಸಿಗರು ಮತ್ತು ಸಿಬ್ಬಂದಿಯ ನಡುವೆ ಸಾಕಷ್ಟು ಅಂತರ ಇರುವಂತೆ ನೋಡಿಕೊಳ್ಳಲಾಗುತ್ತಿದೆ. ಪ್ರವಾಸಿಗರು ಖಾಲಿ ಮಾಡಿದ ಕೊಠಡಿಯನ್ನು 24 ಗಂಟೆಗಳ ನಂತರವೇ ಸ್ವಚ್ಛಗೊಳಿಸಿ ಸ್ಯಾನಿಟೈಸ್ ಮಾಡಲಾಗುತ್ತಿದೆ. ಎಲ್ಲರೂ ಮುಖಗವುಸು ಧರಿಸುವುದನ್ನು ಕಡ್ಡಾಯ ಮಾಡಲಾಗಿದೆ’ ಎನ್ನುತ್ತಾರೆ ಜೊಯಿಡಾದ ‘ಕಾಡುಮನೆ ಹೋಂ ಸ್ಟೇ’ ಮಾಲೀಕ ನರಸಿಂಹ ಭಟ್.

‘ಪ್ರವಾಸಿಗರು ಉಳಿದುಕೊಂಡಿರುವ ಕೊಠಡಿಗಳ ಬಾಗಿಲಿನವರೆಗೆ ಮಾತ್ರ ಸಿಬ್ಬಂದಿಯ ಸೇವೆಯನ್ನು (ರೂಂ ಸರ್ವಿಸ್) ಸೀಮಿತಗೊಳಿಸಲಾಗಿದೆ. ಮೊದಲಿನಂತೆ, ಕೊಠಡಿಗಳ ಒಳಗೇ ಹೋಗಿ ಆಹಾರ, ಪಾನೀಯ ನೀಡುವ ಪದ್ಧತಿ ಈಗ ಇಲ್ಲ. ಪ್ರವಾಸಿಗರ ವಾಹನಗಳನ್ನು ವಾಸ್ತವ್ಯದ ಪ್ರದೇಶದಿಂದ ಸುಮಾರು 100 ಮೀಟರ್ ದೂರದಲ್ಲೇ ನಿಲುಗಡೆ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ’ ಎಂದು ಕಾರವಾರದ ‘ಓಷಿಯನ್ ಡೆಕ್ ಹೋಮ್‌ಸ್ಟೇ’ ಮಾಲೀಕ ವಿನಯ ನಾಯ್ಕ ಮಾಹಿತಿ ನೀಡುತ್ತಾರೆ.

ಗೋಕರ್ಣ, ಮುರ್ಡೇಶ್ವರ, ಶಿರಸಿಯ ಮಾರಿಕಾಂಬಾ ಮುಂತಾದ ಪ್ರಸಿದ್ಧ ದೇಗುಲಗಳು

> ಕೊರೊನಾ ಭೀತಿ ತಗ್ಗಿದೆ. ಯಾವುದೇ ಪ್ರವಾಸಿ ತಾಣಕ್ಕೆ ಹೋದರೂ ಹೆಚ್ಚು ಜನರು ಕಾಣುತ್ತಿಲ್ಲ. ಕೊರೊನಾ ಭಯ ಅದಕ್ಕೆ ಕಾರಣ. ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ಅರಮನೆ ಮಂಡಳಿಯವರು ತೆಗೆದುಕೊಂಡಿರುವುದರಿಂದ ಯಾವುದೇ ಭಯವಿಲ್ಲದೇ ಮೈಸೂರಿನ ಅರಮನೆ ವೀಕ್ಷಿಸಲು ಬಂದಿದ್ದೇನೆ. ಈ ಹಿಂದೆಯೂ ನೋಡಿದ್ದೆ. ಆದರೆ, ಈಗ ನೋಡುತ್ತಿರುವ ಅರಮನೆ ಹೆಚ್ಚು ಖುಷಿ ಕೊಡುತ್ತಿದೆ.



**-ಸುಜಾತಾ,** ಪ್ರವಾಸಿ